**ಓ.ಎಸ್. ನಂಃ 324/2017**

**ಡಿ.ಡಬ್ಲ್ಯೂಃ 1**

**ದಿನಾಂಕ 17.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಜೆ.ಎಮ್.ಎ. ವಕೀಲರಿಂದಃ**

1. ನನ್ನ ತಂದೆಯಾದ ಸಿದ್ದೇಗೌಡರಿಗೆ ಒಟ್ಟು 3 ಜನ ಗಂಡು ಮಕ್ಕಳು ಹಾಗೂ 2 ಜನ ಹೆಣ್ಣು ಮಕ್ಕಳು ಇದ್ದು, ಅವರು ಈ ದಾವೆಯ ವಾದಿಗಳು ಮತ್ತು ಪ್ರತಿವಾದಿ ಸಂಖ್ಯೆ-2, 4 ಮತ್ತು 5 ರವರು ಆಗಿರುತ್ತಾರೆ. ನನ್ನ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಇದ್ದವು ಎಂದರೆ ಸರಿ.

2. ನನ್ನ ತಂದೆಯವರ ಎಲ್ಲಾ ಆಸ್ತಿಗಳನ್ನು ನಾವು ನಿಪಿ.17 ರ ವಿಭಾಗ ಪತ್ರದ ಪ್ರಕಾರ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ.17 ರ ವಿಭಾಗ ಪತ್ರದಡಿಯಲ್ಲಿಯಲ್ಲಿ ವಾದಿಗಳಿಗೆ ಹಾಗೂ 2 ನೇ ಪ್ರತಿವಾದಿಯಾದ ನನಗೆ ಪಾಲನ್ನು ನೀಡಲಾಗಿತ್ತು ಎಂದರೆ ಸರಿ. ಈ ದಾವೆಯ ಆಸ್ತಿಗಳು ನಿಪಿ.17 ರ ವಿಭಾಗ ಪತ್ರದ ಪ್ರಕಾರ ನನ್ನ ತಂದೆ ಮತ್ತು ತಾಯಿಯ ಜಂಟಿ ಹಿಸ್ಸೆಗೆ ಹೋಗಿತ್ತು ಎಂದರೆ ಸರಿ. ನಿಪಿ.17 ರ ವಿಭಾಗ ಪತ್ರದಡಿಯಲ್ಲಿ ಆಯಾ ಹಿಸ್ಸೆದಾರರ ಹಿಸ್ಸೆಗೆ ಬಂದಿದ್ದ ಆಸ್ತಿಗಳನ್ನು ಅವರವರೇ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿ ನನ್ನ ಜೊತೆಯಲ್ಲಿಯೇ ಇದ್ದರು ಎಂದು ಸ್ವತಃ ನುಡಿದಿರುತ್ತಾರೆ.

3. ನಿಪಿ.17 ರ ವಿಭಾಗ ಪತ್ರದಡಿಯಲ್ಲಿ ನನ್ನ ತಂದೆ ಮತ್ತು ತಾಯಿಯ ಜಂಟಿ ಹಿಸ್ಸೆಗೆ ಹೋಗಿದ್ದ ದಾವಾ ಆಸ್ತಿಗಳು ನನ್ನ ತಂದೆಯವರ ಹೆಸರಿಗೆ ಖಾತೆ ವರ್ಗಾವಣೆ ಆಗಿತ್ತು. ನಿಪಿ.17 ರ ವಿಭಾಗ ಪತ್ರದಡಿಯಲ್ಲಿ ನನ್ನ ತಂದೆ ಮತ್ತು ತಾಯಿಯ ಜಂಟಿ ಹಿಸ್ಸೆಗೆ ಹೋಗಿದ್ದ ದಾವಾ ಆಸ್ತಿಗಳು ನನ್ನ ತಂದೆ ಮತ್ತು ತಾಯಿಯ ಮರಣದ ನಂತರದಲ್ಲಿ ಯಾರಿಗೆ ಸೇರಬೇಕು ಎಂದು ನಿಪಿ.17 ರ ದಾಖಲೆಯಲ್ಲಿ ನಮೂದಗಿರುವುದಿಲ್ಲ. ನಿಪಿ.17 ರ ವಿಭಾಗ ಪತ್ರದಡಿಯಲ್ಲಿ ನನ್ನ ತಂದೆ ಮತ್ತು ತಾಯಿಯ ಜಂಟಿ ಹಿಸ್ಸೆಗೆ ಹೋಗಿದ್ದ ದಾವಾ ಆಸ್ತಿಗಳನ್ನು ನನ್ನ ತಂದೆ ಮತ್ತು ತಾಯಿ ಇಬ್ಬರು ಸೇರಿ ಜಂಟಿಯಾಗಿ

ಹಕ್ಕು ಖುಲಾಸೆ  ಪತ್ರದ ಮೂಲಕ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ನಿಪಿ.1 ರ ಹಕ್ಕು ಖುಲಾಸೆ  ಪತ್ರವನ್ನು ಬರೆದು ಕೊಡುವ ಪೂರ್ವದಲ್ಲಿ ನನಗೆ ದಾವಾ ಆಸ್ತಿಗಳ ಮೇಲೆ ಹಕ್ಕು ಇರಲಿಲ್ಲ ಎಂದರೆ ಸರಿ.

4. ನನ್ನ ತಂದೆಯವರು ದಿನಾಂಕ 30.03.2017 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಮರಣ ಹೊಂದುವಾಗ ಅವರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ನಿಪಿ.1 ರ ಹಕ್ಕು ಖುಲಾಸೆ  ಪತ್ರದಡಿಯಲ್ಲಿ ನನಗೆ ದಾವಾ ಐಟಂ ನಂ.1 ಆಸ್ತಿಯನ್ನು ಮಾತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರಿಗೆ ಅವರ ಸಹಿಯನ್ನು ಹಾಕುವುದನ್ನು ಹೊರತುಪಡಿಸಿ ಅವರಿಗೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ.

5. ನನ್ನ ತಾಯಿಯವರು ದಿನಾಂಕ 04.12.2024 ರಂದು ನನ್ನ ತಾಯಿ ಮರಣ ಹೊಂದಿರುತ್ತಾರೆ. ನನ್ನ ತಾಯಿಗೆ ಅಲ್ಪ ಸ್ವಲ್ಪ ಓದಲು ಬರುತ್ತಿದ್ದು, ಅವರಿಗೆ ಕೇವಲ ತಮ್ಮ ಸಹಿ ಮಾತ್ರ ಹಾಕಲು ಬರುತ್ತಿತ್ತು. ನಿಪಿ.1 ರ ದಾಖಲೆಯನ್ನು ನನ್ನ ಹೆಸರಿಗೆ ಬರೆದುಕೊಡುವ ಕಾಲಕ್ಕೆ ದಾವಾ ಐಟಂ ನಂ.1 ರ ಆಸ್ತಿಯು ನನ್ನ ಮತ್ತು ನನ್ನ ತಂದೆ ತಾಯಿಯ ಜಂಟಿ ಹೆಸರಿನಲ್ಲಿರಲಿಲ್ಲ.

6. ನಿಪಿ.1 ರ ದಾಖೆಯನ್ನು ನನ್ನ ತಂದೆ ತಾಯಿ ಹೇಳಿ ತಯಾರಿಸಿರುತ್ತಾರೆ. ಯಾರಿಂದ ಯಾರ ಮೂಲಕ ನಿಪಿ.1 ರ ದಾಖಲೆಯನ್ನು ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ರ ದಾಖಲೆಯನ್ನು ತಯಾರಿಸುವಾಗ ನಾನು ಅಲ್ಲಿ ಹಾಜರಿರಲಿಲ್ಲ ಆದರೆ ನಿಪಿ.1 ರ ದಾಖಲೆಯನ್ನು ನೊಂದಣಿ ಮಾಡುವಾಗ ನಾನು ಹಾಜರಿದ್ದೆ. ದಿನಾಂಕ 02.03.2017 ರಂದು ನಿಪಿ.1 ರ ದಾಖಲೆಯನ್ನು ತಯಾರಿಸಿರುತ್ತಾರೆ. ನಾನು ನಿಪಿ.1 ರ ದಾಖಲೆಯನ್ನು ನೊಂದಣಿ ಮಾಡಲು ನೊಂದಾಣಾಧಿಕಾರಿಗಳ ಕಚೇರಿಗೆ ಹೋಗಿದ್ದಾಗ ನಿಪಿ.1 ರ ದಾಖಲೆಯು ತಯಾರಾಗಿತ್ತು.

7. ನಿಪಿ.1 ರ ದಾಖಲೆಯಾದ 1 ತಿಂಗಳ ಒಳಗಾಗಿ ನನ್ನ ತಂದೆಯವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ತಮ್ಮ ಮರಣದವರೆಗೂ ಆರೋಗ್ಯವಂತರಾಗಿದ್ದು, ನಿಪಿ.1 ರ ದಾಖಲೆ ಬರೆದುಕೊಟ್ಟ ನಂತರದಲ್ಲಿ ನನ್ನ ತಂದೆಯವರಿಗೆ ಪಾಶ್ವ ವಾಯು (Paralysis)ಆಗಿತ್ತು. ನ್ನ ತಂದೆಯವರಿಗೆ ಪಾಶ್ವ ವಾಯು (Paralysis) ಆದ ನಂತರದಲ್ಲಿ ಮೈಸೂರಿನ ಕೆ. ಆರ್ ಆಸ್ಪತ್ರೆಯಲ್ಲಿ

ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ಆಸ್ಪತ್ರೆಯಲ್ಲಿ ನನ್ನ ತಂದೆ 3-4 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ನನ್ನ ತಂದೆಯವರು ಪಾಶ್ವ ವಾಯು (Paralysis) ಸಂಬಂದಿ ಕಾಯಿಲೆಗೆ ಮೈಸೂರಿನ ಕೆ. ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದ ಬಗ್ಗೆ ದಾಖಲೆಗಳು ನನ್ನ ಬಳಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

8. ನನ್ನ ತಂದೆಯವರು ಮರಣ ಹೊಂದುವ ಪೂರ್ವದಲ್ಲಿ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಅನಾರೋಗ್ಯದಲ್ಲಿದಾಗ ಅವರ ಅನಾರೋಗ್ಯ ಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಾನು ನಿಪಿ.1 ರ ದಾಖಲೆಯನ್ನು ಸೃಷ್ಟಿಸಿಕೊಂಡಿರುತೇನೆ ಎಂದರೆ ಸರಿಯಲ್ಲ.

9. ನಿಪಿ.1 ರ ದಾಖಲೆಯನ್ನು ನನ್ನ ಹೆಸರಿಗೆ ಬರೆದುಕೊಡುವಾಗ ನನ್ನ ಸಹೋದರರು ಮತ್ತು ಸಹೋದರಿಯರು ಅಲ್ಲಿ ಹಾಜರಿರಲಿಲ್ಲ. ನಿಪಿ.1 ರ ದಾಖಲೆಯನ್ನು ನನ್ನ ಹೆಸರಿಗೆ ಬರೆದು ಕೊಡುವುದಾಗಿ ಸುಮಾರು 15 ದಿನಗಳ ಪೂರ್ವದಲ್ಲಿಯೇ ನನ್ನ ತಂದೆ ಮತ್ತು ತಾಯಿ ನನ್ನ ಬಳಿ ಹೇಳಿದ್ದರು. ನಿಪಿ.1 ರ ದಾಖಲೆಯನ್ನು ನನ್ನ ತಂದೆ ತಾಯಿ ನನಗೆ ಬರೆದುಕೊಡುವ ಅಥವಾ ಬರೆದುಕೊಟ್ಟಿರುವ ವಿಷಯವನ್ನು ನಾನು ನನ್ನ ಸಹೋದರರು ಮತ್ತು ಸಹೋದರಿಯರಿಗೆ ಹೇಳಿರುವುದಿಲ್ಲ.

10. ನನ್ನ ತಂದೆಗೆ ಕೆಲವು ಆಪ್ತ ವ್ಯಕ್ತಿಗಳಿದ್ದು, ಅವರು ಸಹ ಮರಣ ಹೊಂದಿರುತ್ತಾರೆ. ನನ್ನ ತಂದೆಯವರ ಆಪ್ತರ ಹೆಸರು ರಾಜಶೆಟ್ಟಿ, ತಮ್ಮಣ್ಣಯ್ಯ ಮತ್ತು ಸಾಗರಕಟ್ಟೆಯ ಸಣ್ಣಯ್ಯ ಅಂತ ಇರುತ್ತದೆ. ಅವರು ಮೂವರು ಸಹ ಮರಣ ಹೊಂದಿರುತ್ತಾರೆ. ನನ್ನ ತಂದೆಯವರ ಆಪ್ತರಾದ ಸದರಿ 3 ಜನ ವ್ಯಕ್ತಿಗಳು ನಿಪಿ.1 ರ ದಾಖಲೆ ಆಗುವ ಕಾಲಕ್ಕೆ ಬಹುಶಃ ಜೀವಂತವಿದ್ದರು.

11. ನಿಪಿ.1 ರ ದಾಖಲೆಯು ನೊಂದಣಿ ಆಗುವ ಕಾಲಕ್ಕೆ ನಾನು, ನನ್ನ ತಂದೆ, ತಾಯಿ ಮತ್ತು ನನ್ನ ತಂದೆಯವರು ಕರೆದು ತಂದಿದ್ದ ಸಾಕ್ಷಿದಾರಾದ ರಮೇಶ ಮತ್ತು ಬಸವರಾಜಪ್ಪ ರವರು ಹಾಜರಿದ್ದರು. ನಿಪಿ.1 ರ ಸಾಕ್ಷಿದಾರಾದ ರಮೇಶ ಮತ್ತು ಬಸವರಾಜಪ್ಪ ರವರು ಜೀವಂತವಿದ್ದಾರೆ. ನಿಪಿ.1 ರ ಸಾಕ್ಷಿದಾರಾದ ರಮೇಶರವರಿಗೆ ಈಗ 28 ವರ್ಷ ವಯಸ್ಸಾಗಿರಬಹುದು ಹಾಗೂ ಬಸವರಾಜಪ್ಪರವರಿಗೆ ಈಗ 58 ವರ್ಷ

ವಯಸ್ಸಾಗಿರಬಹುದು. ನಿಪಿ.1 ರ ಸಾಕ್ಷಿದಾರರು ನನ್ನ ತಂದೆಯ ವಯಸ್ಸಿನವರಲ್ಲ ಎಂದರೆ ಸರಿ.

12. ದಾವಾ ಆಸ್ತಿಯನ್ನು ನಾನೊಬ್ಬನೇ ಕಬಳಿಸುವ ಉದ್ದೇಶದಿಂದ ಮೋಸದಿಂದ ನಿಪಿ.1 ರ ದಾಖಲೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆ ಆದ ಕಾಲಕ್ಕೆ ನನ್ನ ತಂದೆಯವರಿಗೆ ಬುದ್ದಿ ಶಕ್ತಿ ಸರಿಯಾಗಿ ಇಲ್ಲದಿದ್ದು, ಅದರ ದುರ್ಲಾಭವನ್ನು ಪಡೆದು ನಾನು ನಿಪಿ.1 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನನಗೆ ಜಂಟಿ ಹಕ್ಕು ಇಲ್ಲದಿದ್ದ ಕಾರಣ ನಿಪಿ.1 ರ ದಾಖಲೆಯಡಿಯಲ್ಲಿ ನನಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಪ್ರಾಪ್ತಿಯಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ಸಹೋದರ ಮತ್ತು ಸಹೋದರಿಯರಿಗೂ ಸಹ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**